ಓಡಿ ಹೋಗಿ ಎಲ್ಲರನ್ನು ಬರಮಾಡಿಕೊಂಡು ಮೊಮ್ಮಗಳನ್ನು ಎತ್ತಿಕೊಳ್ಳಲು ಪ್ರಯತ್ನಿಸಿದಳು. ಅವಳು ಕೊಸರಿಕೊಂಡು ತಾಯಿಯ ಸೆರಗನ್ನು ಹಿಡಿದುಕೊಂಡಳು. ಸೊಸೆಗೆ 'ವಸ್ದಲ್ವೆ ಅದ್ಕೆ ಮಗು ಎದರ್ತಿದೆ' ಎಂದು ಹೇಳಿದಳು. ಸರಸ್ವತಿ ಏನೊಂದೂ ಮಾತನಾಡದೆ ಸುಮ್ಮನೆ ಮನೆಯೊಳಗೆ ನಡೆಯತೊಡಗಿದಳು. ನಂಜಮ್ಮ ಮತ್ತೆ ಮಗನಿಗೆ ಕಾರು ನಿಂದೆ ಯೇನ್ಲ ಎಂದು ಕೇಳಿದಳು. ಅವನು ಮೆತ್ತಗೆ ಹೌದೆಂದು ನುಡಿದು ನಾಲ್ಕು ಲಕ್ಷವಾಯಿತೆಂದು ತಿಳಿಸಿದ. ಅವಳು, 'ಒಂದ್ಮಾತೇಳಾಕಿಲ್ಲೇನೊ ಊರೆಲ್ಲ ಕೇಳಿ ವಡ್ಕಂಡ್ ಬತ್ತಿದ್ದೆ' ಎಂದು ನುಡಿದು ಒಂದು ದೀರ್ಘವಾದ ನಿಟ್ಟುಸಿರು ಬಿಟ್ಟು ನಂತರ, 'ಬಿಡು ಮೊಕ, ಈ ಮುದುಕೀಗೆ ಕಾರ್ನ ಉಸಾಬ್ರಿ ಯಾಕೆ' ಎಂದು ಸುಮ್ಮನಾದಳು. ವೆಂಕಟೇಶ ಮನೆಯೊಳಗೆ ನಡೆದು ಕುಳಿತುಕೊಳ್ಳುವಾಗ ಮಳೆಗೆ ಗೋಡೆ ತೂತಾಗಿರುವ ಜಾಗವನ್ನು ಗಮನಿಸಿದ. ನಂಜಮ್ಮ ಮಗ ಅದರ ಬಗ್ಗೆ ಏನಾದರು ಕೇಳಬಹುದು ಎಂದುಕೊಂಡಳು. ಆದರೆ ಅವನು ಮಾತನಾಡುವ ಗೊಡವೆಗೆ ಹೋಗದೆ ಸುಮ್ಮನೆ ಕುಳಿತುಕೊಂಡ. ಬಿಡು ಮನೇನೆ ಕೆಡ್ವಿ ವಸ ಮನೆ ಕಟ್ಟಿಸೋ ಪ್ಲಾನಲ್ಲಿದಾನಲ್ವೆ. ಅಂದ್ಮೇಕೆ ಇದನ್ನೆಲ್ಲಿ ಕೇಳಿಯಾನು ಎಂದುಕೊಂಡ ಅವಳು ಅಡುಗೆ ಮನೆಗೆ ನಡೆದು ಒಲೆ ಹತ್ತಿಸಿ ಕಾಫಿ ಮಾಡಿಕೊಂಡು ಬಂದು ಎಲ್ಲರಿಗೂ ಕೊಟ್ಟಳು. ಅಷ್ಟರಲ್ಲಿ ನಾಗರಾಜನೂ ಬಂದ. ಮತ್ತೆ ಒಳಹೋದ ಅವಳು ಮತ್ತೊಂದು ಲೋಟ ತಂದು ನಾಗಾರಾಜನ ಕೈಗಿತ್ತಳು. ನಾಗರಾಜ ಕಾಫಿ ಕುಡಿಯುತ್ತ, 'ಏನ್ ನಂಜಕ್ಕ ಮೊಮ್ಮಗಳು ನಿನ್ನಂಗೆ ಅಂತ ಜಂಬ ಕೊಚ್ಕೋತಿದ್ದೆ. ನೋಡು ಎಷ್ಟು ಬೆಳ್ಗವುಳೆ' ಎಂದು ಕೇಳಿದ. ಅದಕ್ಕೆ ನಂಜಮ್ಮ, 'ಸಿಟೀನಾಕ ಇದ್ರೆ ಇನ್ನೆಂಗಿರ್ತಾರೆ. ಹಳ್ಳಿನಾಕೆ ಇದ್ದಿದ್ರೆ ನನ್ನಂಗೆ ಕಪ್ಪಕರ್ತಿದ್ಲು' ಎಂದು ನುಡಿದು ಮೊಮ್ಮಗಳ ಬಳಿ ನಡೆದು, 'ಏನ್ ಎಸರವ್ವ' ಎಂದು ಕೇಳಿದಳು. ವೆಂಕ್ಟೇಶ 'ಸೌಪರ್ಣಿಕ' ಎಂದು ಹೇಳಿದ. ಇನ್ನೂ ಹತ್ತಿರ ಹೋದ ಅವಳು, 'ನಂಕೆ ಕಸ್ಟ ಕಣಪ್ಪ, ನಾ ಮಗ್ಗಿ ಅಂತ ಕರೀತೀನಿ' ಎಂದಳು. ಮೊಮ್ಮಗಳ ಕೈ ಹಿಡಿದು, 'ಮಗ್ಗಿ ಬಾರೊ ಇಲ್ಲಿ, ಮಾರಾಣಿ ಇದ್ದಂಗಿದೀ... ನನ್ ದೃಷ್ಟೀನೆ ತಾಕೋಂಗೈತಿ' ಎಂದು ನುಡಿದು ನಟಿಕೆ ಮುರಿದಳು. ನಂತರ ನಾನಾ ರೀತಿಯಲ್ಲಿ ಮಾತನಾಡಿಸಲು ಪ್ರಯತ್ನಿಸಿದಳು. ನಂಜಮ್ಮ ಎಷ್ಟೆ ಪ್ರಯತ್ನ ಪಟ್ಟರು ಮೊಮ್ಮಗಳು ಸರಸ್ವತಿಗೆ ಮತ್ತಷ್ಟು ಅಂಟಿಕೊಳ್ಳುತ್ತಿದ್ದಳು. ಅಡುಗೆ ಮನೆಗೆ ಹೋಗಿ ಸುಗುಂಡೆಗಳನ್ನು ತಂದು ಅವಳ ಬಾಯಿಯ ಹತ್ತಿರ ಇಟ್ಟು ತಿನ್ನಿಸಲು ಪ್ರಯತ್ನಿಸಿದಳು. ಸಾಧ್ಯವಾಗದೆ ಸೊಸೆಯ ಮುಂದೆ ತಟ್ಟೆ ಇಟ್ಟು ತಿನ್ನಿಸಲು ಹೇಳಿದಳು. ಮತ್ತೊಂದು ತಟ್ಟೆಯನ್ನು ತಂದು ವೆಂಕಟೇಶ ಹಾಗು ನಾಗರಾಜನ ಮುಂದಿಟ್ಟಳು. ನಾಗರಾಜ ತಟ್ಟೆಗೆ ಕೈಹಾಕಿ ಎರಡ್ಮೂರು ಸುಗುಂಡೆಗಳನ್ನು ತಿಂದ. ವೆಂಕಟೇಶ, 'ಬೇಡವ್ವೊ ಈಗ್ತಾನೆ ಹೋಟ್ಲಲ್ಲಿ ಮಸಾಲೆ ದೋಸೆ, ಇಡ್ಲಿ ತಿನ್ಕಂಡ್ ಬಂದ್ವಿ' ಎಂದು ನುಡಿದ. ನಂಜಮ್ಮ ಮಗನ ಕಡೆಗೇ ನೋಡತೊಡಗಿದಳು. ಅವನು ನಿಧಾನಕ್ಕೆ ತಲೆ ಬಗ್ಗಿಸಿ ನೆಲವನ್ನು ದೃಷ್ಟಿಸತೊಡಗಿದ. ನಂಜಮ್ಮ, 'ಅಲ್ಲ ಮೊಕ, ಮನೇಕೆ ಬರೋರು ಹೋಟ್ಲಲ್ಲಿ ಎಂಗ್ ತಿಂದ್ರಿ' ಎಂದು ಕೇಳಿದಳು. ಅವನು ಸುಮ್ಮನಿದ್ದ. ಅವಳಿಗೆ ಏನನ್ನಿಸಿತೊ ಎರಡೂ ತಟ್ಟೆಗಳನ್ನು ಎತ್ತಿಕೊಂಡು ಹೋಗಿ ಅಡುಗೆ ಮನೆಯಲ್ಲಿ ಇಟ್ಟು ಒಂದು ಮೂಲೆಗೆ ಕುಳಿತುಬಿಟ್ಟಳು. ನಾಗರಾಜ ಎದ್ದು ಆಚೆ ಬಂದು ಒಂದೆರಡು ಫೋನುಗಳನ್ನು ಮಾಡಿದ. ಸ್ವಲ್ಪ ಹೊತ್ತಿಗೆ ಮಂಜೇಗೌಡ ಮತ್ತು ಶ್ರೀರಾಮರೆಡ್ಡಿ ನಂಜಮ್ಮನ ಮನೆಗೆ ಬಂದರು. ನಂಜಮ್ಮನಿಗೆ ವಿಷಯ ಬೇರೆ ಏನೋ ಇರುವುದರ ಸೂಕ್ಷ್ಮ ಅರಿವಾಗತೊಡಗಿತು. ಅವಳು ಅಡುಗೆ ಮನೆಯಿಂದ ಎದ್ದು ಆಚೆ ಬಂದಳು. ಎಲ್ಲರನ್ನು ಕೂರಲು ಹೇಳಿದ ನಾಗರಾಜ ನಂತರ ನಂಜಮ್ಮನ ಮಗ ನಗರದಲ್ಲಿ